**ಹಿರಿಯ ಸಿವಿಲ್ ನ್ಯಾಯಾಧೀಶರು, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.**

**ದಿನಾಂಕ *28* ನೇ ಮೇ *2024***

**ಅಸಲು ದಾವಾ ಸಂಖ್ಯೆಃ *143/2023***

**ಅರ್ಜಿದಾರರು** : **ಶ್ರೀಮತಿ ತಾಯಮ್ಮ ಬಿ.**

**ವಿರುದ್ಧ**

**ಎದುರುದಾರರು** : **ಕಾರ್ಯಪಾಲಕ ಇಂಜಿನಿಯರ್ ಸಿ.ಇ.ಎಸ್.ಸಿ. ಮತ್ತು ಇತರರು**

**ಃಃ ವಿವಾದಾಂಶಗಳು ಃಃ**

1. ದಿನಾಂಕ 12.06.2019 ರಂದು ರಾತ್ರಿ ಸುಮಾರು 8-30 ಗಂಟೆ ಸಮಯದಲ್ಲಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ಹೊಡೆದು, ಅಪಘಾತವಾದ ಪರಿಣಾಮ ವಿದ್ಯುತ್ ಕಂಬದ ವಯರ್ ತುಂಡಾಗಿ ಬಿದ್ದಿದ್ದು, ಕಾರಿನಲ್ಲಿದ್ದವರನ್ನು ರಕ್ಷಿಸಲು ಕಾರಿನಿಂದ ಹೊರ ತೆಗೆಯುತ್ತಿರುವಾಗ ಟ್ರಿಫ್ ಆಗಿದ್ದ ಕರೆಂಟ್ ಮತ್ತೆ ಬಂದಿದ್ದರಿಂದ ಕಾರಿನಲ್ಲಿದ್ದ ಗಾಯಾಳುಗಳನ್ನು ರಕ್ಷಿಸುತ್ತಿದ್ದ ತಮ್ಮ ಮಗ ಮೃತ ಪ್ರದೀಪ್ ಕುಮಾರ್ ರವರಿಗೆ ವಿದ್ಯುತ್ ಸ್ಪರ್ಶ ಉಂಟಾದ ಪರಿಣಾಮ ಕರೆಂಟ್ ಹೊಡೆದು ಮೃತಪಟ್ಟಿರುತ್ತಾರೆಂದು ವಾದಿ ಸಾಭೀತುಪಡಿಸುವರೇ?

2. ತಮ್ಮ ಮಗ ಪ್ರದೀಪ್ ಕುಮಾರ್ ರವರು ಕರೆಂಟ್ ಹೊಡೆದು ಮೃತಪಡಲು ಪ್ರತಿವಾದಿಯವರ ನಿರ್ಲಕ್ಷವೇ ಕಾರಣ ಎಂಬುದನ್ನು ವಾದಿ ಸಾಭೀತುಪಡಿಸುವರೇ?

3. ತಾನು ತನ್ನ ಜೀವನ ನಿರ್ವಹಣೆಗಾಗಿ ತನ್ನ ಮಗ ಮೃತ ಪ್ರದೀಪ್ ಕುಮಾರ್ ರವರ ಆದಾಯವನ್ನು ಅವಲಂಬಿಸಿದ್ದೆನೆಂದು ವಾದಿ ಸಾಭೀತುಪಡಿಸುವರೇ?

4. ವಾದಿ ತಮ್ಮ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರಾಗಿರುವರೇ?

5. ಮಾಡುವ ಆದೇಶ ಅಥವಾ ಡಿಕ್ರಿ ಏನು?

**ಶ್ರೀಮತಿ ಹರಿಣಿ ಎಂ.ಎಸ್.** ಬಿ.ಎ. ಎಲ್.ಎಲ್.ಬಿ.
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**